1. ಹಡಗು: ವಿಮಾನ ಹತ್ತುವ ಸ್ಥಳದವರೆಗೆ ಮೊದಲನೆ ದರ್ಜೆ ರೈಲು ಪ್ರಯಾಣ ದರ ನೀಡಲಾಗುವುದು.
2. ಹಡಗು: ವಿಮಾನದ ವಾಸ್ತವ ದರ ನೀಡಲಾಗುವುದು.
3. ಭಾರತದೊಳಗೆ ಪ್ರಯಾಣಿಸುವಾಗ ದಿನವೊಂದಕ್ಕೆ ರೂ. 16.00 ರಂತೆ ಪ್ರಾಸಂಗಿಕ ವೆಚ್ಚ ನೀಡಲಾಗುವುದು.
4. ವಿಮಾನ ನಿಲ್ದಾಣ ಶುಲ್ಕ
5. ಅಂತರ್ ರಾಷ್ಟ್ರೀಯ ಪಂದ್ಯಾವಳಿಗಳನ್ನು ಸಂಘಟಿಸುವ ಸಮಿತಿಯು ನಿರ್ಧರಿಸಿದಂತೆ, ಭೋಜನ : ವಸತಿ ದರ ನೀಡಲಾಗುವುದು.
6. ರಾಷ್ಟ್ರೀಯ ಫೆಡರೇಷನ್‌ಗಳು ನಿರ್ಧರಿಸುವ ಕಿಟ್ ಅಲೋಯನ್ಸ್ ನೀಡಲಾಗುವುದು.

ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರ (ಕರ್ನಾಟಕ ಕ್ರೀಡಾ ಪ್ರಾಧಿಕಾರ)ರಲ್ಲಿ ಮಾನ್ಯತೆ ಹಾಗೂ ಸಹಾಯಧನ ಪಡೆಯಲು, ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಈ ಕೆಳಕಂಡ ಅರ್ಹತೆಗಳಿರಬೇಕಾಗಿದೆ:-

1. ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸುವ ದಿನಾಂಕದಿಂದ ಒಂದು ವರ್ಷದ ಹಿಂದೆಯೇ ರಾಜ್ಯ ಕ್ರೀಡಾ ಸಂಸ್ಥೆಗಳು ಸ್ಥಾಪಿತವಾಗಿರಬೇಕು.
2. 1960ರ ಸಂಘ ಸಂಸ್ಥೆ ನೊಂದಣಿ ಅಧಿನಿಯಮದನುಸಾರ ನೊಂದಾಣಿಗೊಂಡಿರಬೇಕು.
3. ಪ್ರತೀ ಕ್ರೀಡೆಯಲ್ಲೂ, ಸಂಬಂಧಿಸಿದ ರಾಷ್ಟ್ರೀಯ ಫೆಡರೇಷನಗಳಿಂದ ಅಂಗೀಕೃತವಾದ ರಾಜ್ಯ ಕ್ರೀಡಾ ಸಂಸ್ಥೆಗಳು ಮಾತ್ರ ಮಾನ್ಯತೆ ಪಡೆಯಲು ಅರ್ಹರಾಗಿರುತ್ತವೆ.
4. ಭಾರತ ಸರ್ಕಾರ, ರಾಜ್ಯ ಸರ್ಕಾರ, ಕರ್ನಾಟಕ ಕ್ರೀಡಾ ಪ್ರಾಧಿಕಾರ (ಕ.ಕ್ರೀ.ಪ್ರಾ) ಹೊರಡಿಸುವ ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
5. ಉದ್ದೇಶಿತ ಕಾರಣಗಳಿಗಾಗಿ ನೀಡಲಾಗುವ ಸಹಾಯಧನವನ್ನು ಉಪಯೋಗಿಸಿಕೊಳ್ಳಲು ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರ (ಕ.ಕ್ರೀ.ಪ್ರಾ) ಸೂಚಿಸುವ ನಿಯಮಗಳನ್ನು ಅನುಸರಿಸಲು ರಾಜ್ಯ ಕ್ರೀಡಾ ಸಂಸ್ಥೆಗಳು ಸಮ್ಮತಿಸಬೇಕು.

ವಿಷಯ:- ಮಾಗಡಿಗೆ ತಾಲ್ಲೂಕು ಮಟ್ಟದ ಕ್ರೀಡಾಂಗಣ.

107(363)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1. ಮಾಗಡಿಯಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಮಂಜೂರಾದ ಒಟ್ಟು ಹಣವೆಷ್ಟು? ಇದುವರೆಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ;

2. ಕ್ರೀಡಾಂಗಣ ನಿರ್ಮಾಣ ಕಾರ್ಯ ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು? ನಿರ್ಮಾಣ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):-

1. ಮಾಗಡಿಯಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ಮಾಡಲು ರೂ. 24.00 ಲಕ್ಷಗಳ ಯೋಜನೆ ಮತ್ತು ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಇದರಲ್ಲಿ ರೂ. 10.00 ಲಕ್ಷಗಳನ್ನು ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆ ಮಾಡಿದೆ ಮತ್ತು ರೂ. 3.50 ಲಕ್ಷಗಳ ಕೆಲಸ ಕಾರ್ಯವನ್ನು ಪ್ರಾರಂಭಿಸಲು ಲೋಕೋಪಯೋಗಿ ಇಲಾಖೆಗೆ ನೀಡಲಾಗಿದೆ. ಈ ಕಾಮಗಾರಿಯ ನಿರ್ಮಾಣ ಗುತ್ತಿಗೆದಾರರು ಮುಂದೆ ಬಂದಿರುವುದಿಲ್ಲವಾದುದರಿಂದ ಈ ಕೆಲಸಕ್ಕಾಗಿ ಯಾವುದೇ ವೆಚ್ಚವಾಗಿರುವುದಿಲ್ಲ.

2. ಲೋಕೋಪಯೋಗಿ ಇಲಾಖೆಯಿಂದ ಮೂರು ಸಲ ಟೆಂಡರುಗಳನ್ನು ಕರೆಯಲಾಗಿದ್ದರೂ ಸಹ ಗುತ್ತಿಗೆದಾರರು ಮುಂದೆ ಬಂದಿರುವುದಿಲ್ಲ. ಗುತ್ತಿಗೆದಾರರು ಆಯ್ಕೆಯಾದ ಕೂಡಲೇ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ ಕೆಲಸವನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ವಿಷಯ:- ಹಣಕಾಸಿನ ಕಡತದಿಂದ ಅಪೂರ್ಣಗೊಂಡಿರುವ ಕಾಮಗಾರಿಗಳು.

108(367)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1. 1996-97ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಎಷ್ಟು ಕೋಟಿ ರೂ. ವಿತ್ತೀಯ ಕಡಿತವನ್ನು (ಹಣಕಾಸಿನ ಕಡಿತ) ಎದುರಿಸುತ್ತಿದೆ; (ಇಲಾಖಾವಾರು ಹಾಗೂ ಯೋಜನಾವಾರು ಹಣಕಾಸು ಕಡಿತದ ವಿವರ ನೀಡುವುದು;

2. ಹಾಗಿದ್ದಲ್ಲಿ ಇದಕ್ಕೆ ಕಾರಣವೇನು;

3. ಈ ಹಣಕಾಸಿನ ಕಡಿತದಿಂದ ರಾಜ್ಯದಲ್ಲಿನ ಯೋಜನೆಗಳ ಪ್ರಗತಿ ಕುಂಠಿತವಾಗುವುದಿಲ್ಲವೇ; ಈ ಕಡಿತವನ್ನು ಮತ್ತು ಪ್ರಗತಿ ಕುಂಠಿತವನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

4. ಹಣಕಾಸಿನ ಕಡಿತದಿಂದ ಮಾಗಡಿ ಕ್ಷೇತ್ರದಲ್ಲಿ ಅಪೂರ್ಣಗೊಂಡಿರುವ ಕಾಮಗಾರಿಗಳ ಪಟ್ಟಿಯನ್ನು ನೀಡುವುದು?